**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **128** |
| **ಸದಸ್ಯರ ಹೆಸರು** | : | **ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **15.07.2024** |
| **ಉತ್ತರಿಸುವವರು** | : | **ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು** |

| **ಕ್ರ. ಸಂ.** | **ಪ್ರಶ್ನೆ** | **ಉತ್ತರ** |
|---|---|---|
| (ಅ) | ರಾಜ್ಯದಲ್ಲಿ ಇತ್ತೀಚೆಗೆ ಆನೆಗಳ ಸಾವಿನ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | ಆನೆ ಗಣತಿ 2023 ರ ಪ್ರಕಾರ, ಕರ್ನಾಟಕ ರಾಜ್ಯವು ದೇಶದಲ್ಲಿ ಅತಿ ಹೆಚ್ಚು ಕಾಡಾನೆಗಳನ್ನು ಹೊಂದಿದ್ದು, ರಾಜ್ಯದಲ್ಲಿ ಕಾಡಾನೆಗಳ ಸಂಖ್ಯೆ 6395 ಆಗಿದೆ. ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ಕೇಂಬ್ರಿಡ್ಜ್ ರವರು ಪ್ರಕಟಿಸಲಾದ ಶ್ರೀ ಆರ್. ಸುಕುಮಾರ್ ಅವರು ಬರೆದ 'ದಿ ಏಷ್ಯನ್ ಎಲಿಫೆಂಟ್: ಇಕಾಲಜಿ ಅಂಡ್ ಮ್ಯಾನೇಜ್ಮೆಂಟ್' ಪುಸ್ತಕದನ್ವಯ ನೈಸರ್ಗಿಕವಾಗಿ ಕಾಡಾನೆಗಳ ಸಾವಿನ ಪ್ರಮಾಣವು ವರ್ಷಕ್ಕೆ ಸರಾಸರಿ 1.8% ರಷ್ಟಿದೆ. 6395 ಆನೆಗಳ ಸಂಖ್ಯೆಯಲ್ಲಿ ವರ್ಷಕ್ಕೆ ಸುಮಾರು 120 ಆನೆಗಳ ಸಾವು ಸ್ವಾಭಾವಿಕವಾಗಿದೆ ಎಂದು ಇದು ಸೂಚಿಸುತ್ತದೆ.<br><br>ರಾಜ್ಯದಲ್ಲಿ ಆನೆಗಳ ಸಾವಿನ ಪ್ರಕರಣಗಳನ್ನು ತಡೆಗಟ್ಟಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-<br><br>**ಸ್ವಾಭಾವಿಕ ಆನೆ ಸಾವು ಪ್ರಕರಣಗಳನ್ನು ಕಡಿಮೆ ಮಾಡಲು:**<br><br>1. **ಜಲ ಸಂಪನ್ಮೂಲಗಳ ಅಭಿವೃದ್ಧಿ**: ಆನೆಗಳಿಗೆ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನ ಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿ ಗೊಳಿಸಲಾಗುತ್ತಿದೆ.<br>2. **ಆವಾಸ ಸ್ಥಾನ ಅಭಿವೃದ್ಧಿ**: ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ, ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br><br>**ಅಸ್ವಾಭಾವಿಕವಾಗಿ ಆನೆ ಸಾವು ಪ್ರಕರಣವನ್ನು ಕಡಿಮೆಗೊಳಿಸಲು:**<br><br>1. **ವಿದ್ಯುತ್ ಲೈನ್ ಮತ್ತು ಕಂಬಗಳ ದುರಸ್ತಿ**: ವಿದ್ಯುತ್ ಸ್ಪರ್ಶದಿಂದ ಉಂಟಾಗುತ್ತಿರುವ ಆನೆ ಸಾವು ಪ್ರಕರಣಗಳನ್ನು ಕಡಿಮೆಗೊಳಿಸಲು ಇಂಧನ ಇಲಾಖೆಗೆ ಪತ್ರ ವ್ಯವಹರಿಸಿ ಅರಣ್ಯ ಪ್ರದೇಶ ಹಾಗೂ ರಕ್ಷಿತ ಪ್ರದೇಶಗಳಲ್ಲಿ ಹಾದು ಹೋಗಿರುವ ಸ್ಥಳಗಳಲ್ಲಿ ಬಾಗಿರುವ ವಿದ್ಯುತ್ ತಂತಿಗಳನ್ನು ಸರಿಪಡಿಸುವಂತೆ ಕೋರಲಾಗಿದೆ.<br><br>2. ರೈಲ್ವೇ ಅಪಘಾತದಿಂದ ಉಂಟಾಗುತ್ತಿರುವ ಆನೆ ಸಾವು ಪ್ರಕರಣಗಳನ್ನು ಕಡಿಮೆಗೊಳಿಸಲು ಜನರಲ್ ಮ್ಯಾನೇಜರ್, ನೈರುತ್ಯ ರೈಲ್ವೇ ವಲಯ ರವರಿಗೆ ಆಯ್ದ ಸ್ಥಳಗಳಲ್ಲಿ ರೈಲುಗಳ ವೇಗವನ್ನು ಕಡಿಮೆಗೊಳಿಸುವಂತೆ ಕೋರಲಾಗಿದೆ. |

| | | |
|---|---|---|
| | | 3. **ಕಾನೂನು ಕ್ರಮ:** ಅಲ್ಲದೇ ಅಸ್ವಾಭಾವಿಕ ಆನೆ ಸಾವಿಗೆ ಕಾರಣವಾಗುತ್ತಿರುವವರ ಮೇಲೆ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರಡಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br><br>4. **ನಿಯಮಿತ ಗಸ್ತು:** ಇಲಾಖೆಯ ಮುಂಚೂಣಿ ಸಿಬ್ಬಂದಿಗಳು ಪ್ರತಿನಿತ್ಯ ಗಸ್ತು ತಿರುಗುತ್ತಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತೆ ವಹಿಸಲಾಗುತ್ತಿದೆ.<br><br>5. **ಜಾಗೃತಿ ಮೂಡಿಸುವ ಕಾರ್ಯಕ್ರಮಗಳು**: ಪರಿಸರ ವ್ಯವಸ್ಥೆಯಲ್ಲಿ ವನ್ಯಜೀವಿಗಳ ಪ್ರಾಮುಖ್ಯತೆ ಮತ್ತು ಅವುಗಳ ಸಂರಕ್ಷಣೆಯ ಅಗತ್ಯತೆಯ ಕುರಿತು ಅರಿವು ಮೂಡಿಸಲು ಅರಣ್ಯದಂಚಿನ ಗ್ರಾಮಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ವನ್ಯಜೀವಿಗಳಿಗೆ ಹಾನಿ ಉಂಟುಮಾಡುವ ಕೃತ್ಯಗಳ ಕಾನೂನು ಪರಿಣಾಮಗಳ ಕುರಿತು ಸಹ ಜನರಿಗೆ ಅರಿವು ಮೂಡಿಸಲಾಗುತ್ತದೆ. |
| (ಆ) | ಇತ್ತೀಚೆಗೆ ಸಾವಿಗೀಡಾದ ಅಂಬಾರಿ ಆನೆಗಳಾದ ಅರ್ಜುನ, ಅಶ್ವತಾಮ ಹಾಗೂ ಇತರೆ ಕಾಡಾನೆಗಳ ತನಿಖೆ ಯಾವ ಹಂತದಲ್ಲಿ ಇದೆ; (ಪ್ರಕರಣವಾರು ವಿವರ ನೀಡುವುದು) | 1. ಅರ್ಜುನ ಆನೆ ಸಾವಿನ ತನಿಖೆ: ಹಾಸನ ಅರಣ್ಯ ವಿಭಾಗದಲ್ಲಿ ಕಾಡಾನೆಗಳ ಸೆರೆಹಿಡಿಯುವ ಕಾರ್ಯಾಚರಣೆ ಸಂದರ್ಭದಲ್ಲಿ ದುರದೃಷ್ಟವಶಾತ್ "ಅರ್ಜುನ" ಆನೆ ದಿನಾಂಕ: 04.12.2023 ರಂದು ಮೃತಪಟ್ಟಿರುತ್ತದೆ.<br><br>ಈ ಘಟನೆಯ ನಂತರ ಪರಿಸ್ಥಿಯನ್ನು ಕೂಲಂಕಷವಾಗಿ ತನಿಖೆ ಮಾಡಲು ಸರ್ಕಾರದಿಂದ ಶ್ರೀ ಅಜಯ್ ಮಿಶ್ರಾ (ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು) ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ಸಮಿತಿಯು ಸಮಗ್ರ ಪರಿಶೀಲನೆಯ ನಂತರ ಫೆಬ್ರವರಿ 2024ರಲ್ಲಿ ಸಮಿತಿಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಸದರಿ ವರದಿಯಲ್ಲಿ ಭವಿಷ್ಯದ ಆನೆ ಸೆರೆಹಿಡಿಯುವಿಕೆಯ ಕಾರ್ಯಚರಣೆಗಳಲ್ಲಿ ಸುರಕ್ಷತೆಯನ್ನು ದಕ್ಷತೆಯಿಂದ ಸುಧಾರಿಸಲು ಮತ್ತು ಈ ರೀತಿಯ ಘಟನೆಗಳನ್ನು ತಡೆಯಲು ವಿವರವಾದ ಶಿಫಾರಸ್ಸುಗಳನ್ನು ಒಳಗೊಂಡಿರುತ್ತದೆ. ಸದರಿ ಸಮಿತಿಯ ವರದಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಕೂಲಂಕಷವಾಗಿ ನಿಯಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಸರ್ಕಾರದ ದಿನಾಂಕ:18.03.2024 ರ ಪತ್ರದಲ್ಲಿ ಪ್ರಮುಅಸಂ(ಅಪಮು) ರವರಿಗೆ ಸೂಚಿಸಲಾಗಿತ್ತು.<br><br>ಮುಂದುವರೆದು, ಸದರಿ ವರದಿಯಲ್ಲಿನ ಶಿಫಾರಸುಗಳನ್ನು ಪರಿಶೀಲಿಸಿ, ಅದರನ್ವಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಸಮಿತಿಯ ಮೌಲ್ಯಯುತವಾದ ಶಿಫಾರಸ್ಸುಗಳನ್ನು ಒಳಗೊಂಡ ಆನೆ ಸೆರೆಹಿಡಿಯುವಿಕೆ ಕಾರ್ಯಾಚರಣೆಗಳಿಗಾಗಿ ಪರಿಷ್ಕೃತ ಕರಡು ಪ್ರಮಾಣಿತ ಕಾರ್ಯಾಚರಣಾ ಕೈಪಿಡಿಯನ್ನು (Pre-Final-SOP) ರಚಿಸಲಾಗಿದೆ. "Standard Operating Procedure for Asian Elephant Capture" ಎಂಬ ಶೀರ್ಷಿಕೆಯಲ್ಲಿ ರಚಿಸಿರುವ ಸದರಿ ಕರಡು ಪರಿಷ್ಕೃತ ಪ್ರಮಾಣಿತ ಕಾರ್ಯಾಚರಣೆ ಕೈಪಿಡಿ (Pre-Final-SOP) ಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.<br>2. ಅಶ್ವತಾಮ ಆನೆ ಸಾವಿನ ತನಿಖೆ: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ದಿನಾಂಕ:10.06.2024 ರಂದು ಅಶ್ವಥಾಮ ಎಂಬ ಸಾಕಾನೆಯು ಮೇಯಲು ಕಾಡಾನೆಗೆ ಹೋಗಿ ಸಂಜೆ ವೇಳೆ ಆನೆ ಶಿಬಿರಕ್ಕೆ ವಾಪಾಸ್ಸಾಗಿ, ಶಿಬಿರದಲ್ಲಿ ನೀಡಿರುವ ಆಹಾರವನ್ನು ತಿನ್ನದೇ ಹಾಗೆಯೇ |

<table>
<tr>
<td></td>
<td></td>
<td>ಮಲಗಿರುತ್ತದೆ. ಮುಂದುವರೆದು ತಡರಾತ್ರಿಯ ವರೆಗೂ ಸದರಿ ಆನೆಯ ಮೇಲೆ ನಿಗಾವಹಿಸಲಾಗಿರುತ್ತದೆ. ಆದರೆ ಮರುದಿನ ದಿನಾಂಕ: 11.06.2024 ರಂದು ಸದರಿ ಆನೆಯು ಶಿಬಿರದ ಸೋಲಾರ್ ತಂತಿಯ ಬಳಿ ಮೃತಪಟ್ಟಿರುತ್ತದೆ. ಸದರಿ ಆನೆಯ ಮರಣೋತ್ತರ ಪರೀಕ್ಷೆಗಾಗಿ 5 ಪಶುವೈದ್ಯರ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯ ವರದಿಯನ್ವಯ ಸದರಿ ಆನೆಯು ಅನಾರೋಗ್ಯದಿಂದ (ಅಂದರೆ ಲಿವರ್ ಮತ್ತು ಪ್ಯಾಂಕ್ರಿಯಾಸ್ ಸಮಸ್ಯೆ) ಮೃತಪಟ್ಟಿರುತ್ತದೆ. ಅಲ್ಲದೇ ಸದರಿ ಸಮಸ್ಯೆಯಿಂದ ಸುಸ್ತಾಗಿ ಕ್ಯಾಂಪಿನ ಸೋಲಾರ್ ತಂತಿಯ ತಾಗಿ ಏಳಲು ಅಸಾಧ್ಯವಾಗಿರುವುದರಿಂದ ಸೋಲಾರ್ ತಂತಿ ಸ್ಪರ್ಶದಿಂದಲೂ ಮೃತವಾಗಿರುವುದು ಒಂದು ಕಾರಣವಾಗಿದೆ. ಮುಂದುವರೆದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಆನೆಯ ಮಾವುತ ಹಾಗೂ ಕ್ಯಾಂಪಿನ ಅರಣ್ಯ ರಕ್ಷಕರನ್ನು ವಿಚಾರಣೆಗೆ ಬಾಕಿ ಇರಿಸಿ ಅಮಾನತ್ತು ಮಾಡಲಾಗಿದೆ. ಅಲ್ಲದೇ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವೃತ್ತ, ಹಾಸನ ರವರ ಅಧ್ಯಕ್ಷತೆಯಲ್ಲಿ ವಿಚಾರಣೆ ನಡೆಸಲು ಪ್ರಮುಅಸಂ(ವಜೀ) ರವರ ಹಂತದಲ್ಲಿ ಸಮಿತಿಯನ್ನು ರಚಿಸಲಾಗಿದೆ.</td>
</tr>
<tr>
<td>(ಇ)</td>
<td>ಇತ್ತೀಚಿಗೆ ಸಾವಿಗೀಡಾದ ಆನೆಗಳ ಸಾವಿನ ಪ್ರಕರಣಗಳೆಷ್ಟು; (ಸಹಜ ಹಾಗೂ ಅಸಹಜ ಸಾವಿನ ಪ್ರಕರಣವಾರು ವಿವರ ನೀಡುವುದು)</td>
<td>ಕಳೆದ ಮೂರು ವರ್ಷಗಳಲ್ಲಿ ಸ್ವಾಭಾವಿಕ ಮತ್ತು ಅಸ್ವಾಭಾವಿಕವಾಗಿ ಮರಣ ಹೊಂದಿರುವ ಆನೆಗಳ ವಿವರ ಈ ಕೆಳಕಂಡಂತಿವೆ:
<table>
<tr><th>ವರ್ಷ</th><th>ಸ್ವಾಭಾವಿಕ</th><th>ಅಸ್ವಾಭಾವಿಕ</th></tr>
<tr><td>2021-22</td><td>73</td><td>16</td></tr>
<tr><td>2022-23</td><td>57</td><td>16</td></tr>
<tr><td>2023-24</td><td>87</td><td>14</td></tr>
<tr><td>2023-24<br>(ಜೂನ್ ಅಂತ್ಯಕ್ಕೆ)</td><td>26</td><td>05</td></tr>
</table>
</td>
</tr>
<tr>
<td>(ಈ)</td>
<td>ಕಾಡು ಪ್ರಾಣಿಗಳು ಹಾಗೂ ಜನರ ಸಹ ಬಾಳ್ವೆಗೆ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು; ಕಾಡು ಪ್ರಾಣಿಗಳು ಹಾಗೂ ಜನರ ನಡುವಿನ ಸಂಘರ್ಷಣೆ ತಪ್ಪಿಸಲು ಸರ್ಕಾರ ಕೈಗೊಂಡ ಶಾಶ್ವತ ಪರಿಹಾರಗಳೇನು;</td>
<td>ಮಾನವ-ವನ್ಯಜೀವಿ ಸಂಘರ್ಷ ಕಡಿಮೆಗೊಳಿಸಲು ಹಾಗೂ ಜನರ ಸಹಬಾಳ್ವೆಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-<br><br>
ಭೌತಿಕ ಅಡೆತಡೆಗಳ ನಿರ್ಮಾಣ:
<ul>
<li>ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದೆ ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.</li>
<li>ರಾಜ್ಯದಲ್ಲಿ ಮಾನವ-ಆನೆ ಸಂಘರ್ಷ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ನಿಯಂತ್ರಿಸಲು ಉಪಯೋಗಿಸಿದ ರೈಲ್ವೆ ಹಳಿಗಳನ್ನು ಉಪಯೋಗಿಸಿಕೊಂಡು ರೈಲ್ವೆ ಬ್ಯಾರಿಕೇಡ್ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ಒಟ್ಟು 332.962 ಕಿ.ಮೀ ರೈಲ್ವೆ ಬ್ಯಾರಿಕೇಡ್ ಅನ್ನು ನಿರ್ಮಿಸಲಾಗಿದೆ.</li>
</ul>
ಆನೆ ಕಾರ್ಯಪಡೆಗಳ ಸ್ಥಾಪನೆ:
<ul>
<li>ಸರ್ಕಾರದ ಆದೇಶ ಸಂಖ್ಯೆ: FEE 170 FWL 2022, ದಿನಾಂಕ:21.11.2022 ರ ಆದೇಶದಲ್ಲಿ ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಹಾಗೂ ಆದೇಶ ಸಂಖ್ಯೆ: FEE 311 FEG 2022 ದಿನಾಂಕ:01.02.2023ರಲ್ಲಿ ಚಾಮರಾಜನಗರ</li>
</ul>
</td>
</tr>
</table>

ಜಿಲ್ಲೆ ಹಾಗೂ ಆದೇಶ ಸಂಖ್ಯೆ: FEE 170 FWL 2022, ದಿನಾಂಕ:30.06.2023 ರಲ್ಲಿ ರಾಮನಗರ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಮತ್ತು ಸರ್ಕಾರದ ಆದೇಶ ಸಂಖ್ಯೆ: FEE 34 FWL 2024, ದಿನಾಂಕ:18.05.2024 ರಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಪ್ರತಿ ಜಿಲ್ಲೆಗೊಂದರಂತೆ ಅಧಿಕಾರಿ / ಸಿಬ್ಬಂದಿಗಳನ್ನೊಳಗೊಂಡ 08 ಆನೆ ಕಾರ್ಯಪಡೆ (Elephant Task Force) ಗಳನ್ನು ರಚಿಸಲಾಗಿರುತ್ತದೆ.

**ಚಿರತೆ ಕಾರ್ಯಪಡೆಗಳ ಸ್ಥಾಪನೆ:**

- ಸರ್ಕಾರದ ಆದೇಶ ಸಂಖ್ಯೆ: FEE 311 FEG 2022(E) ದಿನಾಂಕ: 31.01.2023ರಲ್ಲಿ ಮೈಸೂರು ವೃತ್ತದ ಮೈಸೂರು / ನಂಜನಗೂಡು / ಹೆಚ್.ಡಿ.ಕೋಟೆ / ಸರಗೂರು / ಟಿ.ನರಸೀಪುರ / ಮಂಡ್ಯ / ಪಾಂಡವಪುರ / ನಾಗಮಂಗಲ ವ್ಯಾಪ್ತಿಯಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು ಇವರ ನೇತೃತ್ವದಲ್ಲಿ ಚಿರತೆ ಕಾರ್ಯಪಡೆ (Leopard Task Force)ಯನ್ನು ರಚಿಸಲಾಗಿದೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ರವರ ಅಧಿಕೃತ ಜ್ಞಾಪನಾ ಪತ್ರ ದಿನಾಂಕ: 24.11.2023ರಲ್ಲಿ ಬೆಂಗಳೂರು ಜಿಲ್ಲೆಯ ಕಗ್ಗಲೀಪುರ / ಆನೆಕಲ್ಲು / ಯಲಹಂಕ / ಹೊಸಕೋಟೆ / ಕೆ.ಆರ್.ಪುರಂ ವಲಯಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಚಿರತೆ ಕಾರ್ಯಪಡೆಯನ್ನು ರಚಿಸಲಾಗಿದೆ.

**ಜಲ ಸಂಪನ್ಮೂಲ ಅಭಿವೃದ್ಧಿ:**

- ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿ ಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ.

**ಆವಾಸ ಸ್ಥಾನ ಅಭಿವೃದ್ಧಿ:**

- ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

**ತ್ವರಿತ ಕಾರ್ಯಾಚರಣೆ:**

- ಆನೆ ಕಾರ್ಯಪಡೆ (ETF) ಮತ್ತು ಚಿರತೆ ಕಾರ್ಯಪಡೆ (LTF) ಗಳಿಗೆ 24X7 ಕಾರ್ಯ ನಿರ್ವಹಿಸಲು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕೂಡಲೇ ಕ್ರಮವಹಿಸಲಾಗುತ್ತಿದೆ.
- ಚಿರತೆ / ಹುಲಿ ಹಾವಳಿ ಹೆಚ್ಚಾಗಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಬೋನುಗಳನ್ನು ಇರಿಸಿ ಸೆರೆ ಹಿಡಿದು, ಸೂಕ್ತ ಆವಾಸಸ್ಥಾನಕ್ಕೆ ಸ್ಥಳಾಂತರಿಸಲು ಕ್ರಮವಹಿಸಲಾಗುತ್ತಿದೆ.

- ಕಾಡಾನೆ ಹಾವಳಿ ತುರ್ತು ನಿರ್ವಹಣೆಗಾಗಿ ಕ್ಷಿಪ್ರ ಕಾರ್ಯಪಡೆ ತಂಡಗಳನ್ನು (RRT) ರಚಿಸಿ ನಿರ್ವಹಿಸಲಾಗುತ್ತಿದೆ.
- ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ.
- ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.
- ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.
- ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ.
- ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗ್ಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.
- ವನ್ಯಪ್ರಾಣಿಗಳ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಈಗಾಗಲೇ ರಚಿಸಿರುವ RRT, ADC, ಮತ್ತು ETF ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತಂಡಗಳನ್ನು ಒಟ್ಟುಗೂಡಿಸಿ ಮಾನವ-ವನ್ಯಜೀವಿ ಸಂಘರ್ಷ ಉಪ ತಂಡಗಳಾಗಿ ರಚಿಸಿ ಆಯ್ದ ಸ್ಥಳಗಳಲ್ಲಿ ನಿಯೋಜಿಸಲಾಗಿದೆ.
- ಸರ್ಕಾರದ ಆದೇಶ ಸಂಖ್ಯೆ: ಅಪಜೀ 96 ಎಫ್.ಡಬ್ಲ್ಯೂ.ಎಲ್. 2016 ದಿನಾಂಕ: 01.10.2016 ರಲ್ಲಿ ಮಾನವ ಪ್ರಾಣಕ್ಕೆ ಅಥವಾ ಸ್ವತ್ತಿಗೆ ಅಪಾಯಕಾರಿಯಾಗಿರುವ ಹಾಗೂ ಬೆಳೆನಾಶ ಮಾಡುವ ಕಾಡು ಹಂದಿಗಳನ್ನು ಷರತ್ತುಬದ್ಧವಾಗಿ ಕೊಲ್ಲಲು ಅನುಮತಿ ನೀಡುವ ಬಗ್ಗೆ ಆದೇಶಿಸಲಾಗಿದೆ.

**ಅರಿವು ಮೂಡಿಸಲು:**

- ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.
- ಶಾಲಾ ಮಕ್ಕಳಿಗೆ ಅರಿವು ಮೂಡಿಸಲು "ಚಿಣ್ಣರ ವನದರ್ಶನ" ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ.

**ಸಹಾಯ ಧನ:**

- ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತ ಸರ್ಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.
- ರಕ್ಷಿತ ಅರಣ್ಯ ಪ್ರದೇಶಗಳ ಕಾಡಂಚಿನ ಆಯ್ದ ಗ್ರಾಮಗಳಿಗೆ ಎಲ್ ಪಿ ಜಿ ಗ್ಯಾಸ್, ಸೋಲಾರ್ ದೀಪಗಳನ್ನು ಇಲಾಖೆಯ ವತಿಯಿಂದ ನೀಡಲಾಗುತ್ತಿದೆ.
- ರಕ್ಷಿತ ಅರಣ್ಯ ಪ್ರದೇಶಗಳ ಕಾಡಂಚಿನ ಆಯ್ದ ಗ್ರಾಮಗಳಿಗೆ Cattle Shed ನಿರ್ಮಾಣ ಮಾಡಲು ಸಹಾಯ ಮಾಡಲಾಗುತ್ತಿದೆ.

**ಪರಿಹಾರ**:

- ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಅಂಗವಿಕಲತೆ, ಗಾಯಗೊಂಡವರಿಗೆ ಆಸ್ತಿಪಾಸ್ತಿ ನಷ್ಟ ಪ್ರಕರಣಗಳಲ್ಲಿ ನೀಡುತ್ತಿರುವ ಪರಿಹಾರ ಧನ ಮತ್ತು ಮಾಸಾಶನ ಧನವನ್ನು

| | | |
|---|---|---|
| | | ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್.ಡಬ್ಲ್ಯೂ.ಎಲ್ 2022, ಬೆಂಗಳೂರು ದಿನಾಂಕ:15-12-2022ರಲ್ಲಿ ಪರಿಷ್ಕರಿಸಿ ದುಪ್ಪಟ್ಟು ಮಾಡಿ ಆದೇಶಿಸಲಾಗಿದೆ.<br>• ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆನಾಶ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿವಿಧ ಬೆಳೆಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 130 ಎಫ್.ಡಬ್ಲ್ಯು.ಎಲ್. 2016 ದಿನಾಂಕ:19.09.2016 ರಲ್ಲಿ ನಿಗಧಿಪಡಿಸಿರುವ ಪರಿಹಾರ ಮೊತ್ತವನ್ನು ಪ್ರಸ್ತುತ ದಿನಾಂಕ:18.01.2023 ರ ಆದೇಶದಲ್ಲಿ ದುಪ್ಪಟ್ಟು ಮಾಡಿ ಆದೇಶಿಸಲಾಗಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಅಪಜೀ 171 ಎಫ್.ಡಬ್ಲ್ಯು.ಎಲ್. 2022 ದಿನಾಂಕ: 16.02.2023 ರಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಸಾಕು ಪ್ರಾಣಿಗಳ ಪ್ರಾಣ ಹಾನಿ ಪ್ರಕರಣಗಳಿಗೆ ರಾಜ್ಯ ವಿಪತ್ತು ನಿರ್ವಹಣಾ ನಿಧಿ (SDRF) ರಲ್ಲಿನ ಚಾಲ್ತಿಯಲ್ಲಿರುವ ಪರಿಷ್ಕೃತ ದರಗಳಂತೆ ಪಾವತಿಸಲು ಆದೇಶಿಸಲಾಗಿದೆ.<br>**ತಂತ್ರಜ್ಞಾನ ಬಳಕೆ:**<br>• ರೇಡಿಯೋ ಕಾಲರ್ ಅಳವಡಿಸಿರುವ ಕಾಡಾನೆಗಳ ಚಲನ-ವಲನಗಳನ್ನು ದಿನನಿತ್ಯ ಗಮನಿಸಲು ಇಲಾಖಾವತಿಯಿಂದ "ಹೆಜ್ಜೆ" ಎಂಬ ಡ್ಯಾಶ್ ಬೋರ್ಡ್ ನ್ನು ತಯಾರಿಸಲಾಗಿದೆ.<br>• ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳು ಬಂದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು Advance Alert System ಅನ್ನು ತಯಾರಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುತ್ತಿದೆ.<br>• ಕಾಡಾನೆ ಇರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು ಡಿಜಿಟಲ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ.<br>• ಅರಣ್ಯದಂಚಿನ ಆಯ್ದ ಪ್ರದೇಶಗಳಲ್ಲಿ **"AI"** Based Camera ಗಳನ್ನು ಅಳವಡಿಸಲಾಗಿದ್ದು, ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.<br><br>ಡ್ರೋನ್‌ಗಳ ಮುಖಾಂತರ ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ. |
| (ಉ) | ಕಾಡು ಪ್ರಾಣಿಗಳ ಸಾವಿಗೆ ಕಾರಣರಾದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ಪ್ರಕರಣವಾರು ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಅಸ್ವಾಭಾವಿಕ ಆನೆ ಸಾವು ಪ್ರಕರಣಗಳಲ್ಲಿ ನಿಯಮಾನುಸಾರ ಸಂಬಂಧಪಟ್ಟವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದ್ದು, ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |

**ಸಂಖ್ಯೆ: ಅಪಜೀ 91 ಎಫ್‌ಡಬ್ಲ್ಯೂಎಲ್ 2024**

(**ಈಶ್ವರ ಬಿ.ಖಂಡ್ರೆ**)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

(ಅನುಬಂಧ)

## Case registered details of Unnatural death of Elephants for last 03 years

| SL No | Year | Division | Date of death | Cause of death | FIR/ WLOR no |
|---|---|---|---|---|---|
| 1 | 2021-22 | Bandipura | 15-07-2021 | Electrocution | 109/2021 |
| 2 | 2021-22 | Bengaluru Urban | 25-03-2022 | Road accident | WLOR 02/2021-22 |
| 3 | 2021-22 | Bhadra | 13-11-2021 | Electrocution | WLOR No 01/21-22& Police case No: 130/2021 |
| 4 | 2021-22 | Bhadravati | 06-12-2021 | Electrocution | WLOR No:1/2021-22,Dt:07-12-2021 |
| 5 | 2021-22 | BRT | 14-12-2021 | Electrocution | 087364/2021 date 27-11-2022 |
| 6 | 2021-22 | BRT | 22-01-2022 | Electrocution | PCR No: 04/2021-22 |
| 7 | 2021-22 | Cauvery | 16-06-2021 | Electrocution | 01/2021-22 Date:16-06-2021 |
| 8 | 2021-22 | Chikmagalore | 01-08-2021 | Electrocution | 19/2021-22 |
| 9 | 2021-22 | Hassan | 18-05-2021 | Train accident | 07/2021-22 |
| 10 | 2021-22 | Hassan | 21-03-2022 | Electrocution | FOC: 32/2021-22 |
| 11 | 2021-22 | Madikeri(T) | 29-07-2021 | Electrocution | CC-PCR 471/21 |
| 12 | 2021-22 | Nagarahole | 01-09-2021 | Electrocution | FOC 06/2021 |
| 13 | 2021-22 | Nagarahole | 13-09-2021 | Electrocution | Crime No. 0087/2021 |
| 14 | 2021-22 | Nagarahole | 27-01-2022 | Gunshot | Crime No. 0087/2021 |
| 15 | 2021-22 | Ramanagara | 10-09-2021 | Electrocution | 13/2021-22 |
| 16 | 2022-23 | Bandipur | 13-12-2022 | Road accident | 06/2022-23 |
| 17 | 2022-23 | Bandipura | 08-07-2022 | Electrocution | FOC N0: 04/2022-23 & 112/2022 |
| 18 | 2022-23 | Bandipura | 13-01-2023 | Electrocution | 25/2023 |
| 19 | 2022-23 | Bannerghatta | 04-08-2022 | Electrocution | 01/2022-23 |
| 20 | 2022-23 | Bhadra | 30-11-2022 | Electrocution | WLOR No 01/2022-23 & Police case No: 116/2022 |
| 21 | 2022-23 | Bhadravati | 15-02-2023 | Electrocution | WLOR No:1/2022-23 |
| 22 | 2022-23 | BRT | 31-01-2023 | Electrocution | 0017/2023 dated 31-01-2023 |
| 23 | 2022-23 | Hassan | 27-05-2022 | Gunshot | 03/2022-23 27-05-2022 |
| 24 | 2022-23 | Hassan | 04-10-2022 | Electrocution | FOC: 97/2022-23 |
| 25 | 2022-23 | Madikeri(T) | 03-05-2022 | Electrocution | PCR NO 186/22 |
| 26 | 2022-23 | Madikeri(T) | 25-07-2022 | Electrocution | PCR NO 310/22 |
| 27 | 2022-23 | Madikeri(T) | 25-07-2022 | Electrocution | PCR NO 310/22 |
| 28 | 2022-23 | Shimoga WL | 25-09-2022 | Electrocution | 19/2022-23 |
| 29 | 2022-23 | Shimoga WL | 25-09-2022 | Electrocution | 19/2022-23 |
| 30 | 2022-23 | Virajpete | 02-07-2022 | Electrocution | 4/2022-23 |
| 31 | 2022-23 | Virajpete | 26-07-2022 | Electrocution | 5/2022-23 |
| 32 | 2023-24 | Bandipura | 17-07-2023 | Electrocution | 136/2023 |
| 33 | 2023-24 | Bhadra | 07-11-2023 | Electrocution | WLOR No: 01/2023-24 Date:07-11-2023 Police Case No-0129/2023 Date 07-11-2023 |
| 34 | 2023-24 | Cauvery WI | 11-08-2023 | Electrocution | 01/2023-24 |
| 35 | 2023-24 | Madikeri(T) | 20-05-2023 | Gunshot | PCR 204/23 |
| 36 | 2023-24 | Madikeri(T) | 30-07-2023 | Electrocution | PCR NO 01/2023 |
| 37 | 2023-24 | Mandya | 04-04-2023 | Electrocution | 01/2023-24 |
| 38 | 2023-24 | Mysore(T) | 02-10-2023 | Electrocution | WLOR No-01/23-24 Dated: 02.10.2023 |
| 39 | 2023-24 | Nagarahole | 29-06-2023 | Electrocution | Cr No. 59/2023<br>WLOR 01/2023 |
| 40 | 2023-24 | Nagarahole | 14-12-2023 | Electrocution | FIR No: 0279/2023<br>WLOR No: 04/2023-24 |
| 41 | 2023-24 | Ramanagara | 06-12-2023 | Electrocution | WLOR No: 07/2023-24 |
| 42 | 2023-24 | Virajpete | 27-05-2023 | Electrocution | 8/2023-24 |
| 43 | 2023-24 | Virajpete | 04-06-2023 | Electrocution | 198/2023 |
| 44 | 2023-24 | Yellapura | 22-03-2024 | Electrocution | WLOR No: 02/2023-24 |
| 45 | 2024-25 | Chikkamagalore | 12-05-2024 | Electrocution | WLOR No: 01/2024-25 |
| 46 | 2024-25 | Madikeri(T) | 25-05-2024 | Electrocution | PCR NO 02/2024-25 |
| 47 | 2024-25 | Madikeri(T) | 29-05-2024 | Electrocution | PCR NO 03/2024-25 |
| 48 | 2024-25 | Nagarahole | 12-06-2024 | Electrocution | WLOR 05/2024-25 |
| 49 | 2024-25 | Virajpete | 22-06-2024 | Electrocution | WLOR 01/2024-25 |